


# ಹರಿದಾಸ


**ಕಥೆ : ರೇವತಿ** **ಚಿತ್ರ: ಸದಾಶಿವಂ**


1 ಹರಿದಾಸನು 15ನೇ ಶತಮಾನದಲ್ಲಿ ಜೀವಿಸಿದ್ದ ಪ್ರಸಿದ್ಧ ಸಂತ. ಹುಟ್ಟಿನಿಂದ ಅವನು ಮುಸ್ಲಿಂ ಆಗಿದ್ದನು; ಶ್ರೀಕೃಷ್ಣನನ್ನು ಕುರಿತ ಭಕ್ತಿಗೀತೆಗಳು ಅವನನ್ನು ಆಕರ್ಷಿಸಿದವು. ಹೀಗೆ ಅವನು ಶ್ರೀಕೃಷ್ಣನ ಭಕ್ತನಾದ. ಅವನು ಚಿಕ್ಕವನಾಗಿದ್ದಾಗ ಪೂರ್ವ ಬಂಗಾಳದ(ಈಗಿನ ಬಾಂಗ್ಲಾದೇಶ) ಒಬ್ಬ ಅದ್ವೈತ ಗುರುವಿನ ಭಕ್ತಿಯನ್ನು ನೋಡಿ ಸ್ಫೂರ್ತಿ ಹೊಂದಿದ. ಅವನನ್ನು ಭೇಟಿಯಾಗಲು ನಿರ್ಧರಿಸಿದ.













4
ಒಂದು ಸಲ ಹರಿದಾಸನು ಬೀದಿಯಲ್ಲಿ ಭಜನೆ ಹಾಡುತ್ತಾ ಹೋಗುತ್ತಿದ್ದ. ಭಕ್ತರೆಲ್ಲರೂ ನೋಡುತ್ತಿದ್ದಂತೆಯೇ ಒಬ್ಬ ಅಹಂಕಾರಿಯಾದ ಜಮೀನ್ದಾರ ಆ ದಾರಿಯಲ್ಲೇ ಬಂದ.
ನನ್ನನ್ನು ನೋಡಿಯೂ ತಲೆಬಾಗಿ ನಮಸ್ಕಾರ ಮಾಡದೆ, ನನ್ನನ್ನು ನಿರ್ಲಕ್ಷಿಸುತ್ತಿರುವ ಈ ಮನುಷ್ಯ ಯಾರಿವನು?
ನನಗೆ ಗೌರವ ಸಲ್ಲಿಸದ ಈ ಇವನನ್ನು ಕಾಡಿಗೆ ಎಳೆದುಕೊಂಡು ಹೋಗಿ ಅಲ್ಲೇ ಬಿಟ್ಟುಬಿಡಿ.


5
ಹರಿದಾಸನನ್ನು ಕಾಡಿನಲ್ಲಿ ಬಿಟ್ಟ ನಂತರವೂ ಅವನು ಭಜನೆ ಮಾಡುವುದನ್ನು ನಿಲ್ಲಿಸಲಿಲ್ಲ. ಜಮೀನ್ದಾರನ ಸೇವಕರು ಮರಗಳ ಹಿಂದೆ ಅಡಗಿ ನಿಂತು ಎಲ್ಲವನ್ನೂ ಗಮನಿಸುತ್ತಿದ್ದರು.
ನೋಡು, ಹರಿದಾಸನ ಹಾಡನ್ನು ಹುಲಿ, ಸಿಂಹಗಳೂ ಮೈಮರೆತು ನಿಂತು ಕೇಳುತ್ತಿವೆ. ಅವನು ನಿಜವಾದ ಭಕ್ತನೇ ಆಗಿದ್ದಾನೆ. ಬಾ, ಈ ವಿಷಯವನ್ನು ನಾವು ನಮ್ಮ ಒಡೆಯನಿಗೆ ತಿಳಿಸೋಣ.
ಜಮೀನ್ದಾರನು ತನ್ನ ಸೇವಕರ ಮಾತುಗಳನ್ನು ನಂಬಲಿಲ್ಲ. ಹರಿದಾಸನನ್ನು ಇನ್ನಷ್ಟು ಪರೀಕ್ಷಿಸಬೇಕೆಂದು ಅವನನ್ನು ಪ್ರಚೋದಿಸಲು ಒಬ್ಬಾಕೆ ಕೆಟ್ಟ ಚಾರಿತ್ರ್ಯವುಳ್ಳ ಹೆಂಗಸನ್ನು ಅವನ ಬಳಿಗೆ ಕಳುಹಿಸಿದನು.


6
ಹರಿದಾಸನು ತನ್ನ ಮನೆಯ ಮುಂದೆ ಕುಳಿತು ದೇವರ ನಾಮವನ್ನು ಜಪಿಸುತ್ತಿದ್ದ.
ಸ್ವಾಮಿ, ನೀವು ಆಹಾರವನ್ನು ಸೇವಿಸದೆ ಸತತವಾಗಿ ಜಪ ಮಾಡುತ್ತಿದ್ದರೆ ನಿಮಗೆ ದಣಿವಾಗದೆ? ಈ ಹಾಲನ್ನಾದರೂ ಕುಡಿಯಿರಿ.
ಅಮ್ಮಾ ನೀನಾರು? ದೇವರ ನಾಮವೆಂಬ ಅಮೃತವನ್ನು ಕುಡಿಯುತ್ತಿರುವವನಿಗೆ ದಣಿವು ಹೇಗಾದೀತಮ್ಮಾ? ನೀನೂ ಬಾ, ನನ್ನೊಂದಿಗೆ ಭಜನೆ ಮಾಡು. ಆಗ ಮಾತ್ರವೇ ನಿನಗೆ ಭಗವಂತನ ನಾಮದ ರುಚಿ ಅರ್ಥವಾದೀತು.


7
ಆಕೆ ಹರಿದಾಸನೊಂದಿಗೆ ಭಜನೆ ಮಾಡಿದಂತೆ ನಟಿಸತೊಡಗಿದಳು. ಆದರೂ ಶ್ರೀಕೃಷ್ಣನ ದಿವ್ಯಲೀಲೆ ಅವಳ ಮನಸ್ಸನ್ನು ಸೂರೆಗೊಂಡಿತು. ಅವಳಲ್ಲಿದ್ದ ದುರುದ್ದೇಶವೆಲ್ಲ ಈಗ ಮರೆತುಹೋಯಿತು. ಒಂದು ದಿನ ...
ಇದೇನು ಆಶ್ಚರ್ಯ! ತರುಣಿಯಾದ ಹೆಂಗಸಿನ ಪಕ್ಕದಲ್ಲೇ ಇದ್ದರೂ, ಈತನಿಗೆ ಅವಳತ್ತ ಗಮನವೇ ಇಲ್ಲ! ದೇವರ ನಾಮವನ್ನೇ ಉಸಿರಿನಂತೆ ಎಡಬಿಡದೆ ಜಪಿಸುತ್ತಿದ್ದಾನೆ. ಅವನ ಸೇವೆ ಮಾಡುವ ಮೂಲಕ ಮಾತ್ರವೇ ನಾನು ಪರಿಶುದ್ಧಳಾಗಬಹುದು.
ಅವಳು ಹರಿದಾಸನ ಮುಂದೆ ತಲೆಬಾಗಿ ನಮಸ್ಕರಿಸಿ, ಅವನ ಕ್ಷಮೆ ಬೇಡಿದಳು. ಮುಂದೆ ಅವಳು ಹರಿದಾಸನ ಶಿಷ್ಯೆಯಾಗಿ 'ಹರಿದಾಸಿ' ಎಂಬ ಹೆಸರಿನಿಂದ ಕರೆಯಲ್ಪಟ್ಟಳು.
8
ಆ ಹೆಂಗಸು ಕೂಡ ಅವನ ಜೊತೆಗೆ ಸೇರಿಕೊಂಡು, ಭಜನೆ ಹೇಳಿಕೊಂಡು ಬೀದಿಯಲ್ಲೆಲ್ಲಾ ಸುತ್ತಾಡುತ್ತಿದ್ದಾಳಲ್ಲ!
ಅಷ್ಟೇ ಅಲ್ಲ, ಧಣಿಗಳೆ! ಅವಳು ತನ್ನ ಎಲ್ಲ ಸೊತ್ತನ್ನೂ ಬಡವರಿಗೆ ದಾನ ಮಾಡಿಬಿಟ್ಟಳು.
ಅವರನ್ನು ಸುಮ್ಮನೆ ಬಿಡಬಾರದು. ನಾನು ಸರ್ಕಾರಿ ಅಧಿಕಾರಿಗಳಾದ ಖಾಜಿಗಳಿಗೆ ದೂರು ನೀಡುತ್ತೇನೆ.
9
ಹರಿದಾಸ, ನೀನು ಮುಸ್ಲಿಮನಾಗಿ ಹುಟ್ಟಿ ಈ ರೀತಿಯ ಜೀವನ ನಡೆಸುತ್ತಿರುವುದು ಮಹಾಪಾಪ. ನೀನು ಹಿಂದುವಾಗಿದ್ದೀಯಾ, ಅಲ್ಲದೆ ಹೆಂಗಸಿನ ಜೊತೆಗೆ ಹಾಡುತ್ತಾ ಮೋಜು ಮಾಡುತ್ತಿದ್ದೀಯಾ.
ಖಾಜಿಯವರೆ, ದೇವರ ನಾಮವನ್ನು ಹಾಡುವುದೆಂದರೆ ನನಗೆ ಉಸಿರಾಡಿದಂತೆ. ಆಗ ನಾನು ಆಳಕ್ಕೆ ಮುಳುಗಿ ಶ್ರೀಕೃಷ್ಣನ ಸಾನ್ನಿಧ್ಯವನ್ನು ಅನುಭವಿಸುತ್ತೇನೆ. ಮನುಷ್ಯ ಮಾತ್ರವೇ ಅಲ್ಲ, ಪ್ರಾಣಿಗಳೂ ಇಂಥ ಅನುಭವವನ್ನು ಹೊಂದಲು ಯತ್ನಿಸುತ್ತವೆ.
10
ಪೆದ್ದುಪೆದ್ದಾಗಿ ಮಾತನಾಡಬೇಡ. ನೀನು ಕ್ಷಮೆ ಕೇಳಬೇಕು, ಇನ್ನು ಮುಂದೆ ಹೀಗೆ ಹಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಬೇಕು.
ಈ ಹಠಮಾರಿಗೆ ಲಾಠಿ ಏಟು ಕೊಡಿ, ಆಮೇಲೆ ನದಿಗೆ ಎಸೆಯಿರಿ.
ಉಸಿರಾಡಲಾರೆ ಎಂದು ಪ್ರತಿಜ್ಞೆ ಮಾಡಿ ಯಾರಾದರೂ ಬದುಕಬಲ್ಲರೆ?
11
ಹರಿದಾಸನಿಗೆ ಚೆನ್ನಾಗಿ ಲಾಠಿ ಏಟು ಕೊಟ್ಟು, ಅವನನ್ನು ನದಿಗೆ ಎಸೆದುಬಿಟ್ಟರು. ಅವನು ನೀರಿನಲ್ಲಿ ತೇಲುತ್ತಿದ್ದಾಗ ಮರದ ರಂಬೆಯೊಂದಕ್ಕೆ ಸಿಲುಕಿಕೊಂಡ. !
ಹರೇ ರಾಮ, ಹರೇ ಕೃಷ್ಣ
ಆ ದಾರಿಯಲ್ಲೇ ದೋಣಿಯಲ್ಲಿ ಪ್ರಯಾಣ ಮಾಡುತ್ತಿದ್ದ ಖಾಜಿ ಈ ದೃಶ್ಯವನ್ನು ಕಂಡು, ಹರಿದಾಸನನ್ನು ರಕ್ಷಿಸಿದ.






''ನಿನಗೆ ಬಿಡುವಾದಾಗಲೆಲ್ಲ ಉತ್ಕಟ ಭಾವದಿಂದ ದೇವರನ್ನು ಕರೆ, ವ್ಯಾಕುಲತೆಯಿಂದ ಅವನನ್ನು ಪ್ರಾರ್ಥಿಸು. ನಿನ್ನ ಎಲ್ಲ ದುಃಖಗಳನ್ನೂ ಅವನ ಮುಂದೆ ನಿವೇದಿಸು. ಸರಿಯಾದ ಸಮಯದಲ್ಲಿ ಅವನು ನಿನಗೆ ಮುಕ್ತಿ ನೀಡಿ, ಆನಂದಸಾಗರದಲ್ಲಿ ಈಜಾಡುವಂತೆ ಮಾಡುವನು. ಭಗವಂತನ ಕೃಪೆಗೆ ಸಾಧ್ಯವಾಗದ ಕಾರ್ಯ ಯಾವುದಿದೆ? ನಿನ್ನ ತಲೆಯ ಮೇಲೆ ಅವನ ಕೃಪೆಯೆಂಬ ಗಾಳಿ ಹಗಲೂರಾತ್ರಿ ನಿರಂತರ ಬೀಸುತ್ತಿದೆ.''

— ಶ್ರೀರಾಮಕೃಷ್ಣರು